ಹೇಳಿದಿರಿ. ಆದರೆ ನಮಗೆ ಬಂದಿರುವ ಮಾಹಿತಿಯ ಪ್ರಕಾರ ಕೊಳಚೆ ಪ್ರದೇಶದಲ್ಲಿ, ಕರ್ನಾಟಕ ರಾಜ್ಯಕ್ಕೆ ಸೇರಿದವರು, 222 ಜನ. ಆಂಧ್ರಪ್ರದೇಶಕ್ಕೆ ಸೇರಿದವರು, 26 ಜನ ತಮಿಳುನಾಡಿಗೆ ಸೇರಿದವರು, 23 ಜನ ರಾಜಸ್ಥಾನಕ್ಕೆ ಸೇರಿದವರು, 16 ಜನ ಬಿಹಾರಕ್ಕೆ ಸೇರಿದವರು, 3 ಜನ ಮಹಾರಾಷ್ಟ್ರಕ್ಕೆ ಸೇರಿದವರು, ಒಬ್ಬರು ಮತ್ತೆ 28 ಜನ ಮನೆಗೆ ಬೀಗ ಹಾಕಿ ವ್ಯಾಪಾರಕ್ಕೆ ಹೋದಂತಹವರಿದ್ದಾರೆ. ಇವರಲ್ಲಿ ಜಂಗಮರು 7 ಜನರು, ಮುಸ್ಲಿಮರು 13 ಜನ, ಕ್ರಿಶ್ಚನ್ನರು 5 ಜನ, ಇಬ್ಬರು ಎಸ್‌ಸಿ, ಒಬ್ಬರು ಎಸ್‌ಟಿ ಹೀಗೆ 28 ಜನ ಸಣ್ಣಪುಟ್ಟ ವ್ಯಾಪಾರಕ್ಕಾಗಿ ಹೋಗಿದ್ದಾರೆನ್ನುವುದು ಸರ್ವೆ ವರದಿಯಿಂದ ನಮಗೆ ಗೊತ್ತಾಗಿದೆ. ತಾವೇನು ಹೇಳುತ್ತಿದ್ದೀರೆಂದರೆ, ಹಿಂದೆ ಶ್ರೀ ಸಗೀರ್ ಅಹಮದ್‌ರವರು ಮತ್ತು ಕೊಳಚೆ ನಿರ್ಮೂಲನ ಮಂಡಳಿಯ ಅಧ್ಯಕ್ಷರು ಅಲ್ಲಿ ಕೆಲವು ಬಾಂಗ್ಲದೇಶೀಯರಿದ್ದಾರೆನ್ನುವ ಅಭಿಪ್ರಾಯವನ್ನು ಕೊಟ್ಟಿದ್ದಾರೆ ಎಂದು ಹೇಳಿದಿರಿ ನಾನು ಇನ್ನೊಮ್ಮೆ ಅಲ್ಲಿ ಇರತಕ್ಕಂಥ ಸುಮಾರು 319 ಮನೆಗಳೇನಿವೆ ಆ ಬಗ್ಗೆ ರೀಸರ್ವೆ ಮಾಡಿಸುತ್ತೇನೆ. ಈಗ ವಸಂತ ನಗರದಲ್ಲಿ ಕೊಳಚೆ ಪ್ರದೇಶವಿಲ್ಲ, ಪೂರ್ಣ ವರ್ಗಾಯಿಸಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ವಿದೇಶೀಯರು ಅಕ್ರಮವಾಗಿ ವಲಸೆ ಬಂದು ನಮ್ಮ ರಾಜ್ಯ ಅಥವಾ ದೇಶದಲ್ಲಿದ್ದು ಸಮಾಜ ಹಾಗೂ ರಾಷ್ಟ್ರದ್ರೋಹಿ ಚಟುವಟಿಕೆಗಳನ್ನು ನಡೆಸುತ್ತಿರತಕ್ಕಂಥದ್ದು ನಮಗೆ ಅನೇಕ ಕಡೆಗಳಲ್ಲಿ ಕಂಡುಬಂದಿದೆ. ರಾಜ್ಯ ಸರ್ಕಾರ ಈ ಕುರಿತು ಕೇವಲ ಕೊಳಚೆ ಪ್ರದೇಶಗಳಲ್ಲಿ ಮಾತ್ರವಲ್ಲದೆ, ರಾಜ್ಯದ ಉಳಿದ ಭಾಗಗಳಲ್ಲೂ ಕೂಡ ಪರಿಶೀಲಿಸಿ ಕೇಂದ್ರ ಸರ್ಕಾರಕ್ಕೆ ಮಾಹಿತಿಯನ್ನು ಕೊಡಬೇಕಾಗುತ್ತದೆ. ಎಲ್ಲಿ ಈ ರೀತಿ ಅಕ್ರಮವಾಗಿ ವಲಸೆ ಬಂದು ಇದ್ದಾರೆ ಎನ್ನುವುದು ಸರ್ವೇಕ್ಷಣೆಯಿಂದಲೇ ಗೊತ್ತಾಗುತ್ತದೆ. ಇದರಲ್ಲಿ ರಾಷ್ಟ್ರ ಹಿತ ಇರುವುದರಿಂದ, ಹೀಗೆ ಅಕ್ರಮವಾಗಿ ವಲಸೆ ಬಂದವರನ್ನು ಹೊರಹಾಕುವುದು ನಮ್ಮೆಲ್ಲರ ಜವಾಬ್ದಾರಿಯಾಗಿರುವುದರಿಂದ ಇದಕ್ಕೇನಾದರೂ ವಿಶೇಷವಾದ ಜಾಗೃತ ದಳವನ್ನು ರಚನೆ ಮಾಡಿ ಕೇಂದ್ರ ಸರ್ಕಾರಕ್ಕೆ ತಿಳಿಸುವುದಕ್ಕೆ ರಾಜ್ಯ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕೇಂದ್ರ ಸರ್ಕಾರದವರಿಗೆ ಗೊತ್ತಿಲ್ಲದಂತೆ ದೇಶಕ್ಕೆ ಬರಲು ಆಗುವುದಿಲ್ಲವಲ್ಲಾ, ಗಡಿಯಲ್ಲಿ ಯಾರೇ ಬರಬೇಕಾದರೂ, ಅದು ಪಂಜಾಬ್ ಗಡಿಯಿರಬಹುದು, ಚೈನಾ ಗಡಿಯಿರಬಹುದು, ನೇಪಾಳ ಗಡಿ ಇರಬಹುದು, ಎಲ್ಲಿಂದಾದರೂ ಅವರು ಬರಬೇಕಾದರೆ, ಅಥವಾ ನುಸುಳಿ ಬರಬೇಕಾದರೆ ಆ ಗಡಿಯಿಂದಲೇ ಬರಬೇಕು ಅಪ್ಪಿ ತಪ್ಪಿ ಯಾರಾದರೂ ಬಂದಿದ್ದರೆ, ನಾನು ಈಗಾಗಲೇ ಹೇಳಿದಂತೆ ನಾವು ನಿಗಾ ಇಟ್ಟು ಅಂತಹವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳುತ್ತೇವೆ. ನೀವು ಕೊಳಚೆ ಪ್ರದೇಶದಲ್ಲಿ ಹೀಗಿದ್ದಾರೆ ಎಂದು ಪ್ರಶ್ನೆ ಕೇಳಿದಿರಿ, ನಾವು ಆ ಬಗ್ಗೆ ಉತ್ತರವನ್ನು ಒದಗಿಸಿದ್ದೇವೆ.

ಅಧ್ಯಕ್ಷರು : ಮಾನ್ಯ ಶಿವಾನಂದ ಪಾಟೀಲರು ಬಂದಿರುವುದಿಲ್ಲ, ಮಾನ್ಯ ಅಶೋಕ್‌ರವರು ಮುಂದಿನ ಪ್ರಶ್ನೆ ಕೇಳುವುದು.

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸಿ.ಎ. ಮತ್ತು ಪಾರ್ಕ್‌ಗಳನ್ನು ನಿವೇಶನಗಳನ್ನಾಗಿ ಪರಿವರ್ತನೆ ಮಾಡಿರುವ ಬಗ್ಗೆ

593 (5084) : ಶ್ರೀ ಅಶೋಕ್ ಆರ್. (ಉತ್ತರಹಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕಳೆದ 3 ವರ್ಷದಿಂದ ಎಷ್ಟು ಸಿ.ಎ. ಜಾಗ ಮತ್ತು ಪಾರ್ಕಗಳನ್ನು ಸೈಟ್‌ಗಳನ್ನಾಗಿ ಪರಿವರ್ತನೆ ಮಾಡಲು (ಬಿಡಿಎ ಮಂಜೂರಾತಿ ಪಡೆದ ಖಾಸಗಿ ಲೇಔಟ್‌ಗಳಲ್ಲಿ) ಸರ್ಕಾರ ಅನುಮತಿ ನೀಡಿದೆ: (ವಿವರ ನೀಡುವುದು)

ಆ) ಬೆಂಗಳೂರು ಶ್ರೀ ರಾಜರಾಜೇಶ್ವರಿ ನಗರಸಭೆಯ ವ್ಯಾಪ್ತಿಯಲ್ಲಿ ಬರುವ ನಾಗರಭಾವಿ 9ನೇ ಬ್ಲಾಕ್ 2ನೇ ಹಂತದ ವಿನಾಯಕ ಲೇಔಟ್‌ನಲ್ಲಿರುವ 4ನೇ ಹಂತದಲ್ಲಿರುವ ಸಿ.ಎ. ಜಾಗ ಮತ್ತು ಪಾರ್ಕ್‌ಗಳು ಎಷ್ಟು;

ಇ) ಇದರಲ್ಲಿ ಎಷ್ಟು ಸಿ.ಎ. ಜಾಗ ಮತ್ತು ಪಾರ್ಕ್‌ಗಳನ್ನು ಸೈಟುಗಳನ್ನಾಗಿ ಪರಿವರ್ತನೆ ಮಾಡಲಾಗಿದೆ: ಯಾರಿಗೆ ಪರಿವರ್ತನೆ ಮಾಡಿಕೊಡಲಾಗಿದೆ: (ವಿವರ ನೀಡುವುದು)

ಈ) ಸದರಿ ಪ್ರದೇಶದಲ್ಲಿ ಈಗಾಗಲೇ ಪಾರ್ಕ್ ಮತ್ತು ಸಿ.ಎ. ಜಾಗಗಳಿಗೆ ನಕ್ಷೆ ಮಂಜೂರಾತಿ ಮಾಡಲಾಗಿತ್ತೆ: ಎಷ್ಟು ಕಡೆ ಸದರಿ ಮಂಜೂರಾತಿ ಮಾಡಲಾಗಿದ್ದ ನಕ್ಷೆಗಳನ್ನು ಬದಲಾಯಿಸಿ ಮರು ನಕ್ಷೆಗೆ ಮಂಜೂರಾತಿ ನೀಡಲಾಗಿದೆ (ವಿವರ ನೀಡುವುದು)

ಉ) ಈ ನಕ್ಷೆಗಳನ್ನು ಬದಲಿಸಿ ಮರು ನಕ್ಷೆಗೆ ಅನುಮತಿ ನೀಡಲು ಕಾರಣಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):

ಅ) ಆ ತರಹದ ಅನುಮೋದನೆ ನೀಡಿರುವುದಿಲ್ಲ.

ಆ) ಬಡಾವಣೆಯಲ್ಲಿ ಒಟ್ಟು 19 ಉದ್ಯಾನವನ ಹಾಗೂ 2 ಸಿ.ಎ. ನಿವೇಶನಗಳು ಇವೆ.

ಇ) ಈ) ಉ) ಇಂತಹ ಯಾವುದೇ ಸಿ.ಎ. ಹಾಗೂ ಉದ್ಯಾನವನ ನಿವೇಶನಗಳನ್ನು ವಸತಿ ನಿವೇಶನಗಳಿಗಾಗಿ ಪರಿವರ್ತಿಸಿಲ್ಲ. ಆದರೆ ಹಿಂದೆ ಅನುಮೋದಿತ ವಿನ್ಯಾಸದಲ್ಲಿ 9 ಉದ್ಯಾನವನ ಹಾಗೂ 5 ಸಿ.ಎ. ಜಾಗಗಳು ಇದ್ದು ಮಾರ್ಪಡಿತ ವಿನ್ಯಾಸದಲ್ಲಿ 10 ಉದ್ಯಾನವನಗಳು ಹಾಗೂ 2 ಸಿ.ಎ. ನಿವೇಶನಗಳು ಇವೆ. ವಸತಿ ನಿವೇಶನಗಳಿಗೆ ಕಾಯ್ದಿರಿಸಿದ್ದ ಕೆಲವು ನಿವೇಶನಗಳು ವಸತಿ ಕಟ್ಟಡ ನಿರ್ಮಾಣ ಮಾಡಲು ಯೋಗ್ಯವಲ್ಲವಾದ್ದರಿಂದ ಮಾರ್ಪಡಿತ ವಿನ್ಯಾಸವನ್ನು ಅನುಮೋದಿಸಲಾಗಿದೆ.

ಶ್ರೀ ಆರ್. ಅಶೋಕ್ : ಸನ್ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾದ ಪ್ರಶ್ನೆ ಇವತ್ತು ಬಂದಿದೆ ಬೆಂಗಳೂರು ನಗರದಲ್ಲಿರುವ, ಬಿಡಿಎಯಿಂದ ಅಪ್ರೂವಲ್ ಆಗಿರುವ, ಸಿಎ ಮತ್ತು ಪಾರ್ಕ್ ನಿವೇಶನಗಳನ್ನು ಬಿಡಿಎ ಮತ್ತೆ ಅದನ್ನು ಮಾಡಿಫೈಡ್ ಪ್ಲಾನ್ ಎಂದು ಮಾಡಿ ಸೈಟ್ ಗಳನ್ನಾಗಿ ಮಾಡಿದ್ದಾರೆನ್ನುವ ಪ್ರಶ್ನೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿದ್ದೆ, ಅದಕ್ಕೆ ಅವರು ಈ ರೀತಿ ಅನುಮೋದನೆ ಪಡೆದಿಲ್ಲವೆಂದು ಮೊದಲನೇ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ನಾನೊಬ್ಬ ಜವಾಬ್ದಾರಿಯುತ ಶಾಸಕನಾಗಿ ಈ ಸ್ಥಾನದಲ್ಲಿದ್ದು ಇವತ್ತು ದಾಖಲೆಗಳನ್ನು ಆಧಾರವಾಗಿ ತಂದಿದ್ದೇನೆ, ಬಿಡಿಎರವರು ಹಿಂದೆ ಪ್ಲಾನ್ ಮಾಡಿ ಸ್ಯಟ್ ಯಾವ ಭಾಗ ಪಾರ್ಕ್ ಯಾವ ಭಾಗ, ಸಿಎ ಯಾವ ಭಾಗವೆಂದು ನಾಮಕರಣ ಮಾಡಿ ಮಾರ್ಕ್ ಮಾಡಿದ್ದರು. ಆ ಮಾರ್ಕ್‌ನಲ್ಲೇ ಇವತ್ತು ಸುಮಾರು 150 ಸೈಟುಗಳನ್ನು ಮಾರಾಟ ಮಾಡಿದ್ದಾರೆ. 1992ನೇ ಇಸವಿಯಲ್ಲಿ ಲೇಔಟ್ ಪ್ಲಾನ್ ಮಾಡಿದ್ದಾರೆ, ಮತ್ತೆ 2002ರಲ್ಲಿ ಮಾಡಿಫೈಡ್ ಪ್ಲಾನ್ ಮಾಡಿದ್ದಾರೆ, 1992ರಲ್ಲಿ ಏನು ಸಿಎ ಸೈಟ್ ಇತ್ತೊ ಅದನ್ನು ಬೆಂಗಳೂರು ಸಬ್ ರಿಜಿಸ್ಟಾರ್ ಕಛೇರಿಯಲ್ಲಿ ಮಾರಾಟ ಮಾಡಿದ್ದಾರೆ. ನಾಗರಬಾವಿಯಲ್ಲಿ ಪಾರ್ಕ್ ಆಗಿದ್ದಂತಹ ಜಾಗವನ್ನು 150 ಸೈಟುಗಳನ್ನಾಗಿ ಮಾಡಿ 43ಎ ಯಿಂದ ಜೆಡ್‌ವರೆವಿಗೂ ನಂಬರ್

ಕೊಟ್ಟಿದ್ದಾರೆ. ಮಾರಾಟವಾಗಿರುವ ಪಾರ್ಕ್‌ನ್ನು ಬಿಡಿಎಯವರು ಸ್ಥಳ ಪರಿಶೀಲನೆ ಮಾಡದೆ ಮತ್ತೆ ಅದು ಮಾರಾಟವಾಗಿದೆ ಎಂದು ಗೊತ್ತಿದ್ದರೂ ಕೂಡ ಅಲ್ಲಿನ ಟೌನ್ ಪ್ಲಾನಿಂಗ್ ಅಧಿಕಾರಿಗಳು ಹೇಗೆ ಇದಕ್ಕೆ ಅನುಮೋದನೆಯನ್ನು ಕೊಟ್ಟರು? ಈಗ ಮಾಡಿಫೈಡ್ ಪ್ಲಾನ್ ನಲ್ಲಿ ಏನು ಪಾರ್ಕ ಅನ್ನು ತೋರಿಸಿದ್ದಾರೆ ಅದರಲ್ಲಿ ಪೂರ್ತಿ ಹೈಸ್ಕೂಲ್ ನಡೆಯುತ್ತಿದೆ, ಗ್ರಾನೈಟ್ ಫ್ಯಾಕ್ಟರಿ ನಡೆಯುತ್ತಿದೆ, ಮನೆಗಳಿವೆ, ಕಟ್ಟಡ ವಿದೆ, ಕಮರ್ಷಿಯಲ್ ಕಾಂಪ್ಲೆಕ್ಸ್ ಇದೆ. ಇವರು ಸಿಎ ಎಂದು ನಮ್ಮ ಬಿಡಿಎಗೆ ಕೊಡುತ್ತಿದ್ದಾರೆ, ಪಾರ್ಕ್ ಎಂದು ಸರ್ಕಾರಕ್ಕೆ ಕೊಡುತ್ತಿದ್ದಾರೆ, ಅದ್ಯಾವುದು ಇವತ್ತು ಪಾರ್ಕ್ ಆಗಿ ಉಳಿದಿಲ್ಲ 'ನಾನು ಸನ್ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳುವುದೇನೆಂದರೆ, ಇವರು ಮಾಡಿಫೈಡ್ ಪ್ಲಾನ್ ಮಾಡಬೇಕಾದರೆ, ಆ ಸ್ಥಳವನ್ನು ಪರಿಶಿಲನೆ ಮಾಡಿರಲಿಲ್ಲವೆ? ಟೌನ್‌ಪ್ಲಾನಿಂಗ್ ಅಧಿಕಾರಿಗಳು ಹೋಗಿ ಅಲ್ಲಿ ಸ್ಥಳ ಪರಿಶೀಲನೆ ಮಾಡಿದ್ದರೆ ಸರ್ಕಾರಕ್ಕೆ ಸೇರಬೇಕಾದ ಸುಮಾರು 6 ಕೋಟಿ ರೂ.ಗಳ ಆಸ್ತಿ ಸರ್ಕಾರಕ್ಕೆ ಉಳಿಯುತ್ತಿತ್ತು. ಬಿಡಿಎ ಆಯುಕ್ತರು ಬೆಂಗಳೂರಿನಲ್ಲಿರುವ ಯಾವುದೇ ಅನಧಿಕೃತ ಕಟ್ಟಡವನ್ನು ಒಡೆದುಹಾಕುತ್ತಿದ್ದಾರೆ. ನಾನು ಅವರ ಬಗ್ಗೆ ಅಭಿಮಾನದಿಂದ ಹೇಳುತ್ತಿದ್ದೇನೆ, ಆದರೆ ಅವರ ಕೈಕೆಳಗಿರುವ ಅಧಿಕಾರಿಗಳು ಇವತ್ತು ಸರ್ಕಾರಕ್ಕೆ ಬರಬೇಕಾದ 6 ಕೋಟಿ ರೂ.ಗಳ ಆಸ್ತಿಯನ್ನು ಮಾರಾಟ ಮಾಡುವುದಕ್ಕೆ ನೀವು ಬಿಡಿಎ ಟೌನ್ ಪ್ಲಾನಿಂಗ್ ನವರಿಗೆ ಏಕೆ ಅಧಿಕಾರ ಕೊಟ್ಟಿರಿ? ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದೇನೆಂದರೆ, ಈ ಮಾಡಿಫೈಡ್ ಪ್ಲಾನ್ ಮಾಡುವುದಕ್ಕೆ ಮುಂಚೆ ಏಕೆ ಸ್ಥಳ ಪರಿಶೀಲನೆ ಮಾಡಲಿಲ್ಲ? ಸಬ್ ರಿಜಿಸ್ಟಾರ್ ಕಛೇರಿಯಲ್ಲಿ ರಿಜಿಸ್ಟರ್ ಆಗಿರುವ ದಾಖಲೆಗಳು ನನ್ನಲ್ಲಿವೆ.

11.00 ಎ ಎಂ

ಇಷ್ಟಿದ್ದರೂ ಸಹ ಈ ರೀತಿ ಮಾಡಿರುವುದರಿಂದ ಬಿ ಡಿ ಎ ಮೇಲೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ? ಅದಕ್ಕೋಸ್ಕರವಾಗಿ ನಾನು ಆಗ್ರಹ ಮಾಡುತ್ತಿದ್ದೇನೆ, ಸನ್ಮಾನ್ಯ ಮುಖ್ಯಮಂತ್ರಿಗಳು, ಬಿಡಿಎ ಆಯುಕ್ತರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿ, ಈ ರೀತಿಯ ಯಾವುದೇ ದುರುಪಯೋಗ ನಡೆದಾಗ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂಥ ಒಂದು ಸಮಿತಿಯನ್ನು ಮಾಡುವಿರಾ ಮತ್ತು ಇವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಸದಸ್ಯರು, ಎಲ್ಲಾ ರೆಕಾರ್ಡ್‌ಗಳನ್ನು ತಂದಿದ್ದೇನೆ ಎಂದು ಹೇಳಿದರು. ಅದನ್ನು ನನ್ನ ಕಡೆಗೆ ಕಳುಹಿಸಿ ಕೊಟ್ಟರೆ, ನಾನೇ ಅದನ್ನು ಕೂಲಂಕುಷವಾಗಿ ಅಧ್ಯಯನ ಮಾಡುತ್ತೇನೆ. ಒಂದು ವಿಷಯದ ಬಗ್ಗೆ ನನ್ನಲ್ಲೇ ಅನುಮಾನವಿದೆ, ಕ್ಲಾರಿಟಿ ಇಲ್ಲ. ಅದೇನೆಂದರೆ, ವಿನ್ಯಾಸ ಮಾಡಿದ ಸಂಸ್ಥೆಯೇ, ಮುಂದೆ ಆ ವಿನ್ಯಾಸವನ್ನು ಬದಲಾವಣೆ ಮಾಡಲು ಅವರಿಗೆ ಪವರ್ಸ್ ಇದೆಯೇ, ಇಲ್ಲವೇ, ಎನ್ನುವುದೇ ಪ್ರಶ್ನೆ. ಹಿಂದೆ, 1992ರಲ್ಲಿ ಒಂದು ವಿನ್ಯಾಸ ಮಾಡಿದ್ದರೆಂದು ಹೇಳಿದರು. ಅದನ್ನು 2002ರಲ್ಲಿ ಬದಲಾಯಿಸಿದ್ದು, ಪಾರ್ಕುಗಳಿಗೆ ಮತ್ತು ಸಿ ಎ ಗಳಿಗೆ ಮೀಸಲಾಗಿಟ್ಟಿದ್ದಂಥ ಪ್ರದೇಶವನ್ನು ಸೈಟುಗಳನ್ನಾಗಿ ಮಾಡಿದ್ದಾರೆ ಎಂದು ಹೇಳಿದರು. ನಾನು ಎಲ್ಲವನ್ನೂ ನೋಡುತ್ತೇನೆ. ದಯವಿಟ್ಟು ಮಾನ್ಯ ಸದಸ್ಯರು ಸಂಬಂಧಪಟ್ಟ ದಾಖಲಾತಿಗಳನ್ನು ನನಗೆ ಕಳುಹಿಸಿಕೊಡಬೇಕು.

ಶ್ರೀ ಆರ್. ಅಶೋಕ್ : ಈ ನಕ್ಷೆಯನ್ನು ಬದಲಿಸಲು ಕಾರಣವೇನೆಂದು ಕೇಳಿದ್ದೆ. ಅದಕ್ಕೂ ತಾವು ಏನು ಉತ್ತರವನ್ನೂ ಕೊಟ್ಟಿಲ್ಲ.

ಅಧ್ಯಕ್ಷರು : ಎಲ್ಲವನ್ನೂ ಸಮಗ್ರವಾಗಿ ವೆರಿಫೈ ಮಾಡುತ್ತೇವೆ ಎಂದು ಹೇಳಿದ್ದಾರಲ್ಲಾ. ನೀವು ದಾಖಲಾತಿಗಳನ್ನು ಕಳುಹಿಸಿಕೊಟ್ಟರೆ ಅದನ್ನು ಸಮಗ್ರವಾಗಿ ವೆರಿಫೈ ಮಾಡುತ್ತೇನೆ ಎಂದು ಹೇಳಿದ್ದಾರಲ್ಲ.

ಶ್ರೀ ಆರ್. ಅಶೋಕ್ : ಇದು ಉಪ ಪ್ರಶ್ನೆಯಲ್ಲ. ನಾನು ರೈಟಿಂಗ್‌ನಲ್ಲಿ ಪ್ರಶ್ನೆ ಹಾಕಿರುವುದಕ್ಕೆ ಉತ್ತರ ಬಂದಿಲ್ಲ. ಅದಕ್ಕಾಗಿ ನಾನು ಮುಖ್ಯಮಂತ್ರಿಗಳಲ್ಲಿ ಒಂದು ಆಗ್ರಹವನ್ನು ಮಾಡುತ್ತಿದ್ದೇನೆ, ಬಿಡಿಎ. ಆಯುಕ್ತರ ನೇತೃತ್ವದಲ್ಲಿ ಒಂದು ಸಮಿತಿ ರಚನೆ ಈ ರೀತಿಯ ಅವ್ಯವಹಾರವನ್ನು ತಡೆಗಟ್ಟಲು ಕ್ರಮ ಕೈಗೊಳ್ಳಬೇಕು. ಈ ಮಾಡಿಫೈಡ್ ಪ್ಲಾನ್ ಮಾಡತಕ್ಕಂಥಾದ್ದು ಬೆಂಗಳೂರಿಗೆ ಅವಶ್ಯಕತೆ ಇಲ್ಲ. ಜನರು ಸೈಟು ತೆಗೆದುಕೊಳ್ಳಲು ಬಿ ಡಿ ಎ ಮೇಲೆ ಬಹಳ ನಂಬಿಕೆ ಮತ್ತು ವಿಶ್ವಾಸವನ್ನಿಟ್ಟಿದ್ದಾರೆ, ನಮ್ಮ ಮನೆಯ ಮುಂದೆ ಪಾರ್ಕ್ ಇದೆ, ನಮ್ಮ ಮನೆಯ ಮುಂದೆ ಸಿ ಎ ಜಾಗ ಇದೆ ಎಂದು ನಂಬಿಕೊಂಡಿದ್ದಾರೆ. ಆದರೆ ಇವತ್ತು ಅದ್ಯಾವುದೂ ಕಾಣಲಿಲ್ಲವೆಂದರೆ ಅವರಿಗೆ ಬಿಡಿಎ. ಮೇಲೆ ಇರತಕ್ಕಂಥ ನಂಬಿಕೆಯೇ ಹೊರಟು ಹೋಗುತ್ತದೆ. ಆದ್ದರಿಂದ, ಇದರ ಬಗ್ಗೆ ಸಿ ಒ ಡಿ ರವರಿಂದ ತನಿಖೆ ಮಾಡಿಸಿ ಎಂದು ನಾನು ಕೇಳುತ್ತಿಲ್ಲ, ಅಥವಾ ಬೇರೆಯವರಿಂದ ತನಿಖೆ ಮಾಡಿಸಿ ಎಂದು ಕೇಳುತ್ತಿಲ್ಲ. ಬಿ ಡಿ ಎ ಆಯುಕ್ತರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿ, ಒಂದು ತನಿಖಾ ವರದಿಯನ್ನು ತರಿಸಿಕೊಂಡು, ಇಲ್ಲಿ ತಪ್ಪಿತಸ್ಥರು ಯಾರಿದ್ದಾರೆ, ಅಂದರೆ ಇಲ್ಲಿ ವಿನಾಯಕ ಸೊಸೈಟಿಯವರು ಏನು ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಂಡು, ಪಾರ್ಕನ್ನು ಪಾರ್ಕ್ ಆಗಿ ಉಳಿಸಬೇಕು, ಸಿ ಎ ಯನ್ನು ಸಿ ಎ ಆಗಿ ಉಳಿಸಬೇಕು ಎಂದು ನಾನು ಆಗ್ರಹ ಮಾಡುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಸದಸ್ಯರು, ಬಿ ಡಿ ಎ ವಿಶ್ವಾಸಾರ್ಹತೆಯ ಬಗ್ಗೆ ಜನಗಳಿಗೆ ಅನುಮಾನ ಬರಬಾರದು ಎಂದು ಹೇಳಿದರು. ನನ್ನ ಅನಿಸಿಕೆ ಪ್ರಕಾರ ಮತ್ತು ಬೆಂಗಳೂರಿನ ಬಹುತೇಕ ಜನಗಳ ಅನಿಸಿಕೆ ಪ್ರಕಾರ, ಹಿಂದೆ ಅಂದರೆ ಬಿ ಡಿ ಎ ಹುಟ್ಟಿದಾಗಿನಿಂದ, ಈಗಿರುವಂಥ ವಿಶ್ವಾಸಾರ್ಹತೆಯನ್ನು ಗಳಿಸಿರಲಿಲ್ಲ. ಅಂಥ ಒಂದು ಮಟ್ಟವನ್ನು ಅದು ಮುಟ್ಟಿದೆ ಎನ್ನುವುದು ನನ್ನ ಅಭಿಪ್ರಾಯ. ನನ್ನ ಹಾಗೆಯೇ ಯೋಚನೆ ಮಾಡತಕ್ಕಂಥವರು ಬಹಳ ಜನರಿದ್ದಾರೆ. ಆಯುಕ್ತರ ನೇತೃತ್ವದಲ್ಲಿ ಸಮಿತಿ ಮಾಡಿ, ಆಯುಕ್ತರು ಇದನ್ನು ನೋಡಬೇಕೆಂದು ತಾವು ಹೇಳಿದ್ದೀರಿ. ಆದರೆ ನಾನೇ ಇದನ್ನು ನೋಡುತ್ತಿದ್ದೇನೆ. ದಯವಿಟ್ಟು ನನಗೆ ಸಂಬಂಧಪಟ್ಟ ದಾಖಲಾತಿಗಳನ್ನು ಕಳುಹಿಸಿಕೊಡಿ.

ಶ್ರೀ ಆರ್. ಅಶೋಕ್ : ಬಿ ಡಿ ಎ ಕಮೀಷನರ್‌ರವರ ಮೇಲೆ ನಾನು ಆಪಾದನೆ ಮಾಡಿಲ್ಲ. ನರಸಿಂಹಮೂರ್ತಿಯವರಂಥ ಕಳ್ಳರು ಇದ್ದಾರೆ. ಅವರನ್ನು ಹಿಡಿದಂಥವರು ಬಿ ಡಿ ಎ ಆಯುಕ್ತರೇ. ಆ ರೀತಿಯ ಕಳ್ಳರು ಟೌನ್ ಪ್ಲಾನಿಂಗ್‌ನಲ್ಲಿ ಯಾರಿದ್ದಾರೆ. ಅವರನ್ನು ಹಿಡಿಯಿರಿ ಎಂದು ಹೇಳುತ್ತಿದ್ದೇನೆ ಅಷ್ಟೇ. ನಾನು ಅವರ ಬಗ್ಗೆ ವಿರೋಧ ಮಾಡುತ್ತಿಲ್ಲ.

ಶ್ರೀ ಎಸ್.ಎಂ. ಕೃಷ್ಣ : ಕಳ್ಳರು ಕೇವಲ ಸಮಾಜದಲ್ಲಿ ಇಲ್ಲ. ಬಿ ಡಿ ಎ ನಲ್ಲೂ ಕೆಳಗಿನ ಮಟ್ಟದಲ್ಲಿ ಇರಬಹುದು. ಆದ್ದರಿಂದ, ಅವರ ಮೇಲೂ ಒಂದು ನಿಗಾ, ಒಂದು ಕಣ್ಣು ಇಟ್ಟಿರುತ್ತೇವೆ.

ರಾಜ್ಯದಲ್ಲಿ ಸಣ್ಣ ಉಳಿತಾಯದ ಗುರಿ ಹಾಗೂ ನಿಗಧೀಪಡಿಸಿದ ಮೊತ್ತ

595 (5054) : ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ) ಮಾನ್ಯ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ರಾಜ್ಯದಲ್ಲಿ 2003–2004ನೇ ಸಾಲಿನಲ್ಲಿ ಎಷ್ಟು ಮೊತ್ತದ ಸಣ್ಣ ಉಳಿತಾಯದ ಗುರಿ ಹೊಂದಲಾಗಿತ್ತು?

2) ಎಷ್ಟು ಗುರಿ ಸಾಧಿಸಲಾಗಿದೆ? ಜಿಲ್ಲಾವಾರು ವಿವರ ನೀಡುವುದು;

3) ಕೊಡಗು ಜಿಲ್ಲೆಯ ಸಾಧನೆ ಎಷ್ಟು ಹಾಗೂ ಇದಕ್ಕಾಗಿ ಪ್ರೋತ್ಸಾಹ ಧನ ಎಷ್ಟು ನೀಡಲಾಗಿತ್ತು; ವಿವರ ನೀಡುವುದು?

ಶ್ರೀ ಬಾಬು ರಾವ್ ಬಸವಣ್ಣಪ್ಪ ಚಿಂಚನ್ನೂರು (ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು):

1) 2003–04 ಸಾಲಿಗೆ ಸರ್ಕಾರವು ಸಣ್ಣ ಉಳಿತಾಯ ಗುರಿ ಈ ರೀತಿ ಇರುತ್ತದೆ.

	ಗುರಿ	(ರೂ. ಕೋಟಿಗಳಲ್ಲಿ)
ವರ್ಷ	ಒಟ್ಟು	ನಿವ್ವಳ
2003–04	5445	1815

2) ಸಾಧನೆ (ರೂ. ಕೋಟಿಗಳಲ್ಲಿ)

ವರ್ಷ	ಒಟ್ಟು	ನಿವ್ವಳ
2003 ಜೂನ್ ಅಂತ್ಯದವರೆಗೆ	1126.39	451.55

ಜಿಲ್ಲಾವಾರು ಸಾಧನೆ ಪಟ್ಟಿಯನ್ನು ಅನುಬಂಧದಲ್ಲಿ ಒದಗಿಸಿದೆ.

3) ಕೊಡಗು ಜಿಲ್ಲೆ ಸಾಧನೆ (ರೂ. ಕೋಟಿಗಳಲ್ಲಿ)

ವರ್ಷ	ಒಟ್ಟು	ನಿವ್ವಳ
2003 ಜೂನ್ ಅಂತ್ಯದವರೆಗೆ	7.93	1.94

ಒಂದು ಆರ್ಥಿಕ ವರ್ಷದಲ್ಲಿ ಮಾಡಿದ ಸಂಗ್ರಹಣೆಗೆ ಪ್ರೋತ್ಸಾಹಧನದ ಕ್ಲೈಂಗಳನ್ನು ಮುಂದಿನ ಆರ್ಥಿಕ ವರ್ಷದ ಜೂನ್ ಮಾಹೆಯ ನಂತರ ಇತ್ಯರ್ಥಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಆದ್ದರಿಂದ ವಿವರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.